ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಅತಿ ಹೆಚ್ಚು ನಿಜ ಹೇಳುವ ಸ್ಥಳ ಬಾರ್. ಅತಿ ಹೆಚ್ಚು ಸುಳ್ಳು ಹೇಳುವ ಸ್ಥಳ?



ನ್ಯಾಯಾಲಯದ ಕಟಕಟೆ.

ದೀಪಕ್ ಜಿ.ಕೆ. ಬೆಂಗಳೂರು
ಜಡ್ಡಾದವರು ಮೇಲೋ, ಜಡವಾಗಿರುವವರು ಮೇಲೋ?
ವೈಝೆಡ್ (YZ=Wise Head) ಆದವರು ಮೇಲು.

ಧನ್ಯತಾ ಎಂ.ಸಿ. ಬೆಂಗಳೂರು
'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂದು ಬಸವಣ್ಣನವರು ಹೇಳಿದ್ದೇಕೆ?
ಮುತ್ತಿಗಿಂತ ರುಚಿಯಾದುದಿಲ್ಲವೆಂದು ಎಲ್ಲ ವಿಧದ ಪ್ರೀತಿಗಳೂ ಸಾರುವುದರಿಂದ.

ಮಹಾವೀರ ಕಾಸರ, ಶಿವಮೊಗ್ಗ
ಮನೆಯವರೊಂದಿಗೆ ಇದ್ದಾಗ ಮಾಜಿ ಪ್ರೇಯಸಿ ಎದುರಿಗೆ ಬಂದರೆ ಏನು ಮಾಡುವುದು?



'ನನ್ನ ಪರ್ಸನಲ್ ಹಾರ್ಟ್ ಸ್ಪೆಷಲಿಸ್ಟ್' ಎಂದು ಸತಿಗೆ ಪರಿಚಯಿಸಿ ನೋಡಿ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
'ಅತಿ ವೇಗ ತಿಥಿ ಬೇಗ' ಅಂತಾರೆ. ನೀವೇನಂತೀರಿ?
'ವೈಕುಂಠಕ್ಕೆ ಕರೆಯಲು ಮರೆಯಬೇಡಿ' ಅಂತೀನಿ.

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
ಛೀ ಕಳ್ಳ! ಎಂದು ಮಗನಿಗೆ ಅನ್ನಬೇಕೋ, ಗಂಡನಿಗೆ ಅನ್ನಬೇಕೋ?
ಬಹಿರಂಗದಲ್ಲಿ ಮಗನಿಗೆ; ಏಕಾಂತದಲ್ಲಿ ಕಾಂತನಿಗೆ.

ಎಸ್. ವಿಜಯಕುಮಾರಿ
ಪ್ರಪಂಚದಲ್ಲಿ ಗಂಡಸರು ಮಗುವನ್ನು ಹೆರುವಂತಿದ್ದರೆ ಹೇಗಿರುತ್ತಿತ್ತು ರಾಮ್‌ಜಿ?
ಬರ್‍ರೊಟ್ಟೆಯವನೂ ಗರ್ಭಸ್ಥನೆಂದು ಕಳ್ಳರಜೆ ಪಡೆಯುವುದು ಹೆಚ್ಚುತ್ತಿತ್ತು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
'ಆರಾಮ' ಮಾಡುವ ವೈದ್ಯರಿಗೆ ರೋಗಿಗಳು ಹೆದರುವುದೇಕೆ?
ನಾಳೆ ಆ ರಾಮನನ್ನೇ ನೆನೆಯುವ 'ರಾಮ್‌ನಾಮ್ ಸತ್ಯ ಹೈ' ಆಗಿಬಿಟ್ಟೀತೆಂಬ ಭಯವಂತೆ.

ಸುಶೀಲಾ ಎಸ್. ಪಾಟೀಲ, ಸಂಕೇಶ್ವರ
ಜ್ಯೇಷ್ಠ ನಾಗರಿಕರೆಂದು ಯಾರಿಗೆ ಅನ್ನಬೇಕು?
'ಆಷಾಢ'ಭೂತಿ ಆಗದ ಹಿರಿಯರಿಗೆ.

ಬಿ. ಚಂದ್ರೇಗೌಡ, ಬೆಂಗಳೂರು
'ಬಾಯಿ ಬಿಟ್ಟರೆ ಬಣ್ಣಗೇಡು' ಎಂದರೇನು?
ಅದು 'ಬಣಗೇಡು', ಒಂದೊಂದು ಬಣದ ಭಾಷೆ ಒಂದೊಂದು ರೀತಿ.

ಕಾವ್ಯಶ್ರೀ, ಶೋರಾಪುರ
ಪ್ರಕೃತಿಯಿಂದ ಮಾನವ ಕಲಿಯಬೇಕಾದ ನೀತಿಪಾಠ ಏನು?
ಎಷ್ಟೇ ಪೆಟ್ಟು ಬಿದ್ದರೂ ಬುಡ ಭದ್ರವಾಗಿದ್ದರೆ ಚಿಗುರು ನಿರಂತರ ಎನ್ನುವುದು.

ಗಾಯತ್ರಿ, ಬೆಂಗಳೂರು
ಎಲ್ಲೆಲ್ಲಿ ನೋಡಿದರೂ ಕೋಟಿ ಕೋಟಿ ನುಂಗಣ್ಣರನ್ನೇ ನೋಡುತ್ತೇವಲ್ಲಾ...?
ಎಂಜಲುಂಡು ಮತ ಹಾಕಿದರೆ ಏಂಜಲ್ ದೊರೆತಾನೇ? ಇಳೆಯಿದ್ದಂತೆ ಕಳೆ.

ಮಲ್ಲಿಕಾರ್ಜುನ, ಸುರಧೇನುಪುರ
ಕಾರ್ಮಿಕರಿಗೆ ಮೇ ಡೇ. ಮಾರ್ಮಿಕರಿಗೆ?
ಖೋಡೇ!

ಖಾದ್ರಿ ಮಂಜುಳ, ಬೆಂಗಳೂರು
ವಿಧಾನಸಭೆಗೆ ಚುನಾವಣೆಯ ಬದಲು ಪ್ರವೇಶ ಪರೀಕ್ಷೆ ಇಟ್ಟಿದ್ದರೆ?
ಪರೀಕ್ಷೆಗೆ ಬೇಕಾದ ಪಠ್ಯಪುಸ್ತಕ ನಿರ್ಣಯವೇ ಆಗದಂತೆ ನೋಡಿಕೊಳ್ಳುತ್ತಿದ್ದರು.

## ಬಹುಮಾನಿತ ಪ್ರಶ್ನೆ

ಆದಿನಾರಾಯಣಮುನಿ, ಕೊಳ್ಳೇಗಾಲ
ಕರ್ನಾಟಕವನ್ನು ಪೆಡಂಭೂತದಂತೆ ಕಾಡುತ್ತಿರುವ ಸಮಸ್ಯೆ ಯಾವುದು?
'ಭಾಗ್ಯ'ಕ್ಕೆ ಹಾತೊರೆಯುವ ಶ್ರೀಮಂತರು; ಸತ್ತರೂ ಮತ ಹಾಕೆನೆಂಬ ವಿದ್ಯಾವಂತರು.

ವಿದ್ಯಾ ಎನ್. ಪೈ, ಕಾಸರಕೋಡ
ಗಾಂಧಿಯವರು 'ಮದ್ಯ ಮನುಷ್ಯನ ಶತ್ರು' ಎಂದಿದ್ದೇಕೆ?
ಅದೇ ಎಡವಟ್ಟಾಗಿದ್ದು. ಈಗ ಕುಡುಕರೆಲ್ಲ 'ಶತ್ರುವನ್ನು ಮುಗಿಸುವುದೇ ನಮ್ಮ ಧ್ಯೇಯ' ಎನ್ನುತ್ತಿದ್ದಾರೆ.

ಮೈಸೂರು ಕುಸುಮ, ಶ್ರವಣಬೆಳಗೊಳ
ಅನ್ಯರಂಗದ ಸಾಧಕರಿಗಿಂತ ಸಿನಿಮಾರಂಗದವರಿಗೆ ಯಾಕಿಷ್ಟು ಪ್ರಾಮುಖ್ಯತೆ ಕೊಡುತ್ತಾರೆ?
ಏಕೆಂದರೆ ಅವರಿಗೆ ಸಮಾಜದ ಗಮನವನ್ನು ಸೆಳೆಯುವ 'ಹೀರೊ' ಶಕ್ತಿ ಇರುತ್ತದೆ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ
ಕುದುರೆಯನ್ನ ಕಂಡರೆ ಕಾಲುನೋವು. ಕತ್ತೆಯನ್ನು ಕಂಡರೆ?



ಡ್ರೈಕ್ಲೀನ್ ಆಗಬೇಕಾದ ಬಟ್ಟೆಗಳ ನೆನಪು.

ಗಂಜಾಂ ನಾಗರಾಜ್, ಮೈಸೂರು
ನಿಮ್ಮಿಂದ ಉತ್ತರಿಸಲಾಗದ ಪ್ರಶ್ನೆಗಳು ಬಂದರೆ ಏನು ಮಾಡುತ್ತೀರಿ?
ಗೊತ್ತಿಲ್ಲ. ಅಂತಹ ಪ್ರಶ್ನೆ ಇನ್ನೂ ಬಂದೇ ಇಲ್ಲವಲ್ಲ!

ಮೀನಾಕ್ಷಿ ರಾಮಗುಂಡಿ, ಬೈಲಹೊಂಗಲ
ಕನ್ನಡಕದ ಮೇಲೆ ದೂಳು ಬಿದ್ದರೆ ಚಿತ್ರ ಕಾಣದು. ತಲೆಯಲ್ಲಿ ಅಹಂಕಾರದ ದೂಳು ಬಿದ್ದರೆ?
ಹಿತೈಷಿಗಳ ವಲಯ ಕರಗುವುದು ಕಾಣದು.

■ ರಾಮ್